ದಿಃ 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ-**

ನಾನು 1-15 ಇದರ ತೆರಿಗೆ ತುಂಬುತ್ತೇನೆ ಎಂದರೆ ಸರಿ. ಪ್ರತಿವಾದಿಯು 1-16 ಇದರ ತೆರಿಗೆಯನ್ನು ತುಂಬುತ್ತಾರೆ ಎಂದರೆ ಸರಿ. ನಿ.ಪಿ.6 ರ ಪ್ರಕಾರ ನಾವು ಕಬ್ಜೆಯಲ್ಲಿ ಇರುತ್ತೇವೆ ಎಂದರೆ ಸರಿ. ಪಂಚಾಯತಿ ತೆರಿಗೆಯನ್ನು ನಾನು 1-15 ಇದರ ತೆರಿಗೆ ತುಂಬುತ್ತೇನೆ ಎಂದರೆ ಸರಿ. ಪ್ರತಿವಾದಿಯು 1-16 ಇದರ ತೆರಿಗೆಯನ್ನು ತುಂಬುತ್ತಾರೆ ಎಂದರೆ ಸರಿ. ನಿ.ಪಿ.6 ಹಳೆಯ ದಾಖಲೆ ಆಗಿರುತ್ತದೆ ಎಂದರೆ ಸರಿ. ಇದಕ್ಕೆ ಸಂಬಂಧಿಸಿದ ಹೊಸ ದಾಖಲೆಗಳು ಇರುವುದಿಲ್ಲ ಎಂದರೆ ಸರಿ.

ಪ್ರತಿವಾದಿಯು ತಮ್ಮ ಜಾಗೆಯಲ್ಲಿ ಇದ್ದರು ಎಂದರೆ ಸಾಕ್ಷಿಯು ನಾವೂ ನಮ್ಮ ಜಾಗೆಯಲ್ಲಿ ಇರುತ್ತೇವೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯು ತನ್ನ ಕಬ್ಜೆಯಲ್ಲಿ ಇರುತ್ತಾನೆ ಎಂದರೆ ಸರಿ. ವಿನಾ ಕಾರಣ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಅಡಚಣೆ ಮಾಡಿರುತ್ತಾನೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ದಂಡಾಧೀಕಾರಿಗಳು, ಶಹಾಬಾದ